(MADAM SPEAKER)

Clauses 1, the Long litle, the preamble and the Enacting formula were added to the Bill.

Motion to pass

Sri M. Y. GHORPADE.—I move.

"That the Karnataka Entertainments Tax (Amendment Bill, 1974 be passed."

MADAM SPEAKER.—The question is :

"That the Karnataka Entertaiments Tax (Amendment) Bill, 1974 be passed."

The motion was adopted and the Bill was passed.

Absence of a Minister to move the Motor Vehicles Bill

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಕಾರ್ಯಕ್ರಮದ ಪಟ್ಟಿಯ ಪ್ರಕಾರ ಮೋಟರ್ ವಾಹನಗಳ ತೆರಿಗೆಯ ತಿದ್ದುಪಡಿಗೆ ಸಂಬಂಧಪಟ್ಟ ಮಸೂದೆ ಇದೆ. ನಂತರ ಸ್ಟ್ಯಾಂಪ್ ತಿದ್ದುಪಡಿ ಮಸೂದೆ ಇದೆ. ದಯವಾಡಿ ನನಗೆ ಸಂಬಂಧಪಟ್ಟಿರುವ ಕರ್ನಾಟಕ ಸ್ಟ್ಯಾಂಪ್ ತಿದ್ದುಪಡಿ ಮಸೂದೆಯನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾರ್ಯಕ್ರಮದ ಪಟ್ಟಿಯ ಪ್ರಕಾರ ತೆಗೆದುಕೊಳ್ಳಬೇಕಾದ ಮಸೂದೆಗೆ ಸಂಬಂಧಪಟ್ಟ ಮಂತ್ರಿಗಳಿಲ್ಲವೆಂದರೆ ಹೇಗೆ ? ಬಹಳ ಆಶ್ಚರ್ಯವಾಗಿದೆ.

ಅಧ್ಯಕ್ಷರು.—ಆಶ್ಚರ್ಯವೇನೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಆಶ್ಚರ್ಯ ಮಾತ್ರವಲ್ಲ, ವಿಚಿತ್ರ ಆಶ್ಚರ್ಯವಾಗಿದೆ. ತಾವು ನಿನ್ನೆ ತಾನೇ ಮಂತ್ರಿಗಳು ಸಭೆಯಲ್ಲಿ ಇರಬೇಕೆಂದು ಹೇಳಿದ್ದೀರಿ.

MADAM SPEAKER.—The Hon. Minister has written to me that he will not be in headquarters on 1st, 5th and 6th May 1974 and he has requested me not to include Questions and other subjects pertaining to his protfolio on those days. ಅವರ ಕಾಗದ ಬರುವ ವೇಳೆಗೆ ಕಾರ್ಯಕ್ರಮದ ಪಟ್ಟಿ ಸಿದ್ಧವಾಗಿ ಅದರಲ್ಲಿ ಅವರಿಗೆ ಸಂಬಂಧಪಟ್ಟ ಮಸೂದೆಯನ್ನೂ ಸೇರಿಸಲಾಗಿತ್ತು. ಆದ್ದರಿಂದ ಅದನ್ನು ಬಿಟ್ಟು ಮುಂದಿನ ಮಸೂಧೆಯನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅವರು ಏನು ಕಾರಣ ಊರಿನಲ್ಲಿ ಊರಿನಲ್ಲಿರುವುದಿಲ್ಲವೆಂದು ಹೇಳಿಲ್ಲ. ಸಭೆ ನಡೆಯುವಾಗ ಈ ತರಹ ಮಾನ್ಯ ಮಂತ್ರಿಗಳು ಮಾಡುವುದೇ ಸರಿಯಲ್ಲ.

ಅಧ್ಯಕ್ಷರು.—ಅವರ ಪತ್ರವನ್ನು ಓದಿದ್ದೇನೆ.

Sri S. BANGARAPPA.—We want to know the reasons or the purpose for which the Hon. Minister has left Bangalore.

MADAM SPEAKER.—I have told what the Hon Minister has written in his letter. Beyond that I do not know anything. The hon. Member could raise the issue when the Hon. Minister concerned is present, on some other day.

ಶ್ರೀ ಎಸ್. ಬಂಗಾರಪ್ಪ.—ಅವರು ಊರಿನಲ್ಲಿರುವುದಿಲ್ಲವೆಂದರೆ ಅದು ಖಾಸಗಿ ಕೆಲಸವೇ ಅಥವಾ ಸರ್ಕಾರಿ ಕೆಲಸವೇ ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಅವರು ಏನು ಕಾರಣದಿಂದ ಊರಿನಲ್ಲಿರುವುದಿಲ್ಲವೆನ್ನುವುದನ್ನು ತಿಳಿಸಬೇಕಾಗಿತ್ತು.

ಅಧ್ಯಕ್ಷರು.—ಕಾರಣ ನನಗೆ ಗೊತ್ತಿಲ್ಲ, ಮಾನ್ಯ ಸದಸ್ಯರಿಗೂ ಗೊತ್ತಿಲ್ಲ. ದಯವಿಟ್ಟು ಈಗ ಕುಳಿತುಕೊಳ್ಳಿ.

Karnataka Stamp (Amendment) Bill 1974

MOTION TO CONSIDER

MADAM SPEAKER.—I call upon the Hon. Minister for Revenue to move the motion.

Sri N. HUTCHAMASTHY GOWDA (Minister for Revenue) .—I beg to move :

> "That the Katnataka Stamp (Amendement) Bill, 1974 be taken into consideration."

MADAM SPEAKER.—Motion moved ;

> "That the Karnataka Stamp (Amendment) Bill, I974 be taken into conideration;"

† Sri S. BANGARAPPA.—Madam Speaker, before the Bill is considered, I would like to know either from the Government of from the Chair the purpose for which the Hon. Minister has left Bangalore when the legislature is in session. Whether he has gone on ptivate business or on official duty. Otherwise, we will be forced to press that the item on the agenda concerning the Bill pertaining to the Hon. Ministerfor Transport alne be taken up. This House has every right to know the purpese for which the Hon. Minister has left Bangalore while the legislature is in session.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಊರಿನಲ್ಲಿರುವುದಿಲ್ಲವೆಂದು ನನಗೆ ಕಾಗದ ಬರೆದಿರುವುದರಿಂದ ಅವರಿಗೆ ಸಂಬಂಧಪಟ್ಟಿರುವ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಸದನದ ಅಮೂಲ್ಯ ವೇಳೆಯನ್ನು ವ್ಯಯ ಮಾಡಬಾರದು.

ಶ್ರೀ ಎಸ್. ಬಂಗಾರಪ್ಪ.—ನಾನು ಸದನದ ಅಮೂಲ್ಯ ವೇಳೆಯನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಸದನ ನಡೆಯುತ್ತಿರಬೇಕಾದರೆ, ಅದಕ್ಕೆ ಬೆಲೆ ಕೊಡದೆ ಅನ್ಯಕ್ಷರಿಗೆ ಒಂದು ಪತ್ರ ಬರೆದು ಎಲ್ಲೋ ಹೋಗಿದ್ದಾರೆಂದರೆ ಏಕೆ ಹೋಗಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸದನಕ್ಕೆ ಎಲ್ಲ ಹಕ್ಕುಗಳೂ ಇವೆ.

ಅಧ್ಯಕ್ಷರು.—ನನಗೆ ಗೊತ್ತಿಲ್ಲದೆ ಇರುವುದನ್ನು ತಿಳಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರಿಗೂ ಗೊತ್ತಿಲ್ಲ. ಮಾನ್ಯ ಮಂತ್ರಿಗಳೇ ಬಂದಮೇಲೆ ಅವರನ್ನು ಕೇಳಬಹುದು.

ಶ್ರೀ ಎಸ್. ಬಂಗಾರಪ್ಪ.—ಇದು ಸದನಕ್ಕೆ ಕೊಡತಕ್ಕ ಮರ್ಯಾದೆ ಏನು ? ಇದು ಸದನಕ್ಕೆ ಅವರು ವಿಷಯವನ್ನು ತಿಳಿಸತಕ್ಕ ನಮೂನೆಯಲ್ಲ. ಈ ಸದನ ನಡೆಯಬೇಕಾದರೆ, ಸಚಿವರು ಸ್ಪೇಷನ್‌ನಲ್ಲಿರುವುದನ್ನು ಬಿಟ್ಟು ಬೇರೆ ಊರಿಗೆ ಹೋಗುವುದನ್ನು ನಾವು ಒಪ್ಪುವುದಿಲ್ಲ. ಎಷ್ಟು ಸಾರಿ ನಾವು ಇದನ್ನು ಸಭೆಯಲ್ಲಿ ಹೇಳಬೇಕು! ಇದನ್ನು ನಾವು ಪದೇ ಪದೇ ಎತ್ತಿ ನಿಮಗೆ ತೊಂದರೆ ಕೊಡುವುದಿಲ್ಲ.